# ಕಥೋಪದೇಶ

## ಶ್ರೀರಾಮಕೃಷ್ಣರು ಹೇಳಿದ ಕಥೆಗಳು



### ಆಸೆಯೆಂಬಾ ಮೀನು



ಪದ್ಯಾನುವಾದ : ಡಾ. ಮಧ್ವ ಶಾಮ ಭಟ್ಟ
ಕಲೆ : ಪುರುಷೋತ್ತಮ ಕಾರಂತ

ಹೊಳೆಯ ಬದಿಯಲಿ ಕೆಲವು ಬೆಸ್ತರು
ಬಲೆಯ ಬೀಸುತಲಿದ್ದರು
ಗಿಡುಗ ಮುಳುಗುತ ಮೀನ ಹೆಕ್ಕಿತು
ಹಾರಿ ಮರದಲಿ ತಂಗಿತು. ||೧||

ಹಿಂಡು ಕಾಗೆಗಳೋಡಿ ಬಂದವು
ಹಿಂದೆ ಕೇಕೆಯ ಹಾಕುತ
ನಿಲ್ಲಲೊಲ್ಲವು ಹಾರಲೊಲ್ಲವು
ಎಲ್ಲ ಕಡೆಯಿಂ ತಡೆಯುತ ||೨||

ಗಿಡುಗ ಗಡಿಬಿಡಿಯಿಂದ ಹಾರಲು
ಮೀನು ಕೊಕ್ಕಿಂ ಕಳಚಿತು
ಕಾಗೆ ಹಿಂಡಿದ ಕಂಡು ಕುಣಿದವು
ಸುತ್ತುವರಿದವು ಮೀನನು. ||೩||

ಶಾಂತ ಮನದಲಿ ಗಿಡುಗ ನೆಮ್ಮದಿ
ಶ್ವಾಸ ಬಿಡುತಲಿ ನೆನೆಯಿತು
ಆಸೆಯೆಂಬಾ ಮೀನು ದುಃಖವು,
ಬಿದ್ದುಹೋಗಲು ಸುಖವದು. ||೪||

## ಆಧ್ಯಾತ್ಮಿಕ ಪ್ರಗತಿಯನ್ನು ಲೌಕಿಕ ದೃಷ್ಟಿಯಿಂದ ನೋಡಬೇಡಿ

ಒಂದು ಸಲ ಋಷಿಯೊಬ್ಬ ಗಾಢ ಧ್ಯಾನಾಸಕ್ತನಾಗಿ ರಸ್ತೆಯ ಪಕ್ಕದಲ್ಲಿ ಮಲಗಿದ್ದ. ದಾರಿಯಲ್ಲಿ ಹೋಗುತ್ತಿದ್ದ ಕಳ್ಳನೊಬ್ಬನು ಇದನ್ನು ನೋಡಿ 'ಈ ಮನುಷ್ಯ ಒಬ್ಬ ಕಳ್ಳನಿರಬೇಕು. ಯಾರದೋ ಮನೆಗೆ ಕನ್ನಹಾಕಿ ಈಗ ಸುಸ್ತಾಗಿ ಮಲಗಿರುವನು. ಇನ್ನು ಸ್ವಲ್ಪಹೊತ್ತಿನಲ್ಲಿ ಪೋಲೀಸಿನವರು ಬಂದು ಅವನನ್ನು ದಸ್ತಗಿರಿ ಮಾಡುತ್ತಾರೆ. ಅವರು ಬರುವುದಕ್ಕಿಂತ ಮುಂಚೆ ನಾನು ಓಡಿಹೋಗುವೆನು' ಎಂದು ಭಾವಿಸಿ ಅಲ್ಲಿಂದ ಓಟಕಿತ್ತ. ಸ್ವಲ್ಪ ಕಾಲ ಕಳೆದ ಮೇಲೆ ಒಬ್ಬ ಕುಡುಕ ಬಂದ. ಆ ಸಾಧುವನ್ನು ನೋಡಿ ' ನೀನು ಚೆನ್ನಾಗಿ ಕುಡಿದು ಈಗ ಚರಂಡಿಯಲ್ಲಿ ಬಿದ್ದಿರುವೆ. ಆದರೆ ನಾನು ನಿನಗಿಂತ ಮೇಲು. ಇನ್ನೂ ಸಂಚರಿಸುತ್ತಿರುವೆ. ಕೆಳಗೆ ಬೀಳುವುದಿಲ್ಲ' ಎಂದ. ಕೊನೆಗೆ ಒಬ್ಬ ಸಾಧು ಬಂದ. ಗಾಢಸಮಾಧಿಯಲ್ಲಿ ಮುಳುಗಿರುವ ಸಂತನೆಂದು ತಿಳಿದು ಅವನ ಹತ್ತಿರ ಕುಳಿತು ಅವನ ಕಾಲುಗಳನ್ನು ಒತ್ತತೊಡಗಿದ.

ಹೀಗೆ ನಮ್ಮ ಪ್ರಾಪಂಚಿಕ ಸ್ವಭಾವ ಆಧ್ಯಾತ್ಮಿಕ ವ್ಯಕ್ತಿಯನ್ನು ಗುರುತಿಸಲಾರದು.